# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 293(448) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2025 |

<table>
<tr><th>ಕ್ರಮ. ಸಂಖ್ಯೆ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಒಟ್ಟು ಗ್ರಂಥಾಲಯಗಳೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಪ್ರಸ್ತುತ 1273 ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದೆ.<br>
<table>
<tr><td>1.</td><td>ಶಾಖಾ ಗ್ರಂಥಾಲಯಗಳು</td><td>569</td></tr>
<tr><td>2.</td><td>ಸೇವಾ ಕೇಂದ್ರಗಳು</td><td>129</td></tr>
<tr><td>3.</td><td>ವಾಚನಾಲಯಗಳು</td><td>107</td></tr>
<tr><td>4.</td><td>ಸಂಚಾರಿ ಗ್ರಂಥಾಲಯಗಳು</td><td>3</td></tr>
<tr><td>5.</td><td>ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯ</td><td>31</td></tr>
<tr><td>6.</td><td>ಅಲೆಮಾರಿ ಕೇಂದ್ರ ಗ್ರಂಥಾಲಯಗಳು</td><td>124</td></tr>
<tr><td>7.</td><td>ಕೊಳಚೆ ಪ್ರದೇಶ ಗ್ರಂಥಾಲಯಗಳು</td><td>100</td></tr>
<tr><td>8.</td><td>ಮೇಲ್ದರ್ಜೆಗೊಂಡಿರುವ ಗ್ರಾಮ ಪಂಚಾಯತಿ ಗ್ರಂಥಾಲಯಗಳು</td><td>206</td></tr>
<tr><td>9.</td><td>ಮಕ್ಕಳ ಗ್ರಂಥಾಲಯಗಳು</td><td>4</td></tr>
<tr><td></td><td>ಒಟ್ಟು</td><td>1273</td></tr>
</table>
<br>ಜಿಲ್ಲಾವಾರು ಗ್ರಂಥಾಲಯಗಳ ಮಾಹಿತಿಯನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಕಳೆದ 02 ವರ್ಷಗಳಲ್ಲಿ ಈ ಗ್ರಂಥಾಲಯಗಳಿಗೆ ಎಷ್ಟು ಪುಸ್ತಕಗಳನ್ನು ಖರೀದಿಸಲಾಗಿದೆ: (ಪುಸ್ತಕಗಳ ಹೆಸರು ಮತ್ತು ಅವುಗಳ ಪ್ರಮಾಣದೊಂದಿಗೆ ವಿವರ ಒದಗಿಸುವುದು)</td><td>ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಕಳೆದ 02 ವರ್ಷಗಳಲ್ಲಿ ಖರೀದಿಸಲಾದ ಪುಸ್ತಕಗಳ ವಿವರಗಳು ಬಹುಪುಟಗಳಲ್ಲಿ ಇರುವುದರಿಂದ, ಮಾಹಿತಿಯನ್ನು ಪ್ರಶ್ನೆ ಕೇಳಿರುವ ಮಾನ್ಯ ಸದಸ್ಯರಿಗೆ ಸಿ.ಡಿ ರೂಪದಲ್ಲಿ ಒದಗಿಸಲಾಗಿದೆ.</td></tr>
<tr><td>(ಇ)</td><td>ಗ್ರಂಥಾಲಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಒಟ್ಟು 1482 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 752 ಹುದ್ದೆಗಳು ಭರ್ತಿಯಾಗಿದ್ದು, 730 ಹುದ್ದೆಗಳು ಖಾಲಿ ಇರುತ್ತವೆ.</td></tr>
</table>

| | | |
|---|---|---|
| (ಈ) | ಗ್ರಂಥಾಲಯದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ಇಲ್ಲದಿದ್ದಲ್ಲಿ ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು? | ಪ್ರಸ್ತುತ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ 730 ಹುದ್ದೆಗಳು ಖಾಲಿಯಿದ್ದು, ಮುಂಬಡ್ತಿ ಕೋಟಾದಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳನ್ನು ಅರ್ಹ ಸಿಬ್ಬಂದಿಗಳಿಗೆ ಬಡ್ತಿ ನೀಡುವುದರ ಮೂಲಕ ಭರ್ತಿ ಮಾಡಲಾಗುತ್ತಿದೆ.<br><br>ನೇರ ನೇಮಕಾತಿ ಕೊಟಾದಡಿಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ 18-ಮುಖ್ಯ ಗ್ರಂಥಾಲಯಾಧಿಕಾರಿ, 13-ಗ್ರಂಥಪಾಲಕರು, 21-ಸಹ ಗ್ರಂಥಪಾಲಕರು, 1-ಶೀಘ್ರಲಿಪಿಗಾರರು ಹಾಗೂ 1-ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |

**ಸಂಖ್ಯೆ: ಇಪಿ/ 32 /ಎಲ್‌ಐಬಿ/2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು